# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು (ವಿಧಾನ ಸಭಾ ಕ್ಷೇತ್ರ) ಇವರು ನಿಯಮ-72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

### ಪ್ರಶ್ನೆ:

ಕರ್ನಾಟಕ ರಾಜ್ಯದ ರಾಜಧಾನಿಯ ಜೀವನಾಡಿಯಲ್ಲಿ ಒಂದಾದ ಮೆಟ್ರೋ ರೈಲು ಪ್ರಯಾಣದ ದರವನ್ನು ಏಕಾಏಕಿ 45%-50% ಹೆಚ್ಚಿಗೆ ಮಾಡಿದ್ದು, ದರ ಪರಿಷ್ಕರಣೆ ನಂತರ ಪ್ರತಿ ದಿನ ಸುಮಾರು 1 ಲಕ್ಷ ಪ್ರಯಾಣಿಕರು ಕಡಿಮೆಯಾಗಿದ್ದು, ಮೆಟ್ರೋ ಪ್ರಯಾಣಿಕರು ಬಸ್, ಕ್ಯಾಬ್ ಮತ್ತು ಸ್ವಂತ ವಾಹನಗಳನ್ನು ಸಂಚಾರಕ್ಕಾಗಿ ಉಪಯೋಗಿಸುತ್ತಿದ್ದು, ಒಂದೆಡೆ ಪ್ರಯಾಣಿಕರ ಇಳಿಮುಖದಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗುತ್ತಿದ್ದು ಮತ್ತೊಂದೆಡೆ ಮೆಟ್ರೋ ಪ್ರಯಾಣಿಕರು ಸ್ವಂತ ವಾಹನಗಳನ್ನು ಉಪಯೋಗಿಸುತ್ತಿರುವುದರಿಂದ ಸಂಚಾರ ದಟ್ಟಣೆ ಹೆಚ್ಚಾಗುತ್ತಿರುವ ಕುರಿತು ಚರ್ಚಿಸಲು ನಿಯಮ-72 ರ ಮೇರೆಗೆ ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ಸಚಿವರ ಗಮನ ಸೆಳೆದಿರುವ ಕುರಿತು.

### ಉತ್ತರ :

ಬೆಂಗಳೂರು ಮೆಟ್ರೋ ರೈಲು ನಿಗಮದಲ್ಲಿ ದರವನ್ನು ಜೂನ್ 2017 ರಲ್ಲಿ ಕನಿಷ್ಠ ರೂ.10 ಮತ್ತು ಗರಿಷ್ಠ ರೂ.60 ರಂತೆ ನಿಗದಿಪಡಿಸಲಾಯಿತು. 2017 ರಲ್ಲಿ ದರವನ್ನು ನಿಗದಿಪಡಿಸಿದಾಗ, ಕಾರ್ಯಾಚರಣೆಯ ನೆಟ್‌ವರ್ಕ್ ನ ಉದ್ದ 42.30 ಕಿ.ಮೀ. ಆಗಿತ್ತು, ಅದು ಈಗ 2024 ರಲ್ಲಿ 76.95 ಕಿ.ಮೀ.ಗೆ ವಿಸ್ತರಿಸಿದೆ.

ಮೆಟ್ರೋ ಯೋಜನೆಯ ನಿರ್ವಹಣಾ ವೆಚ್ಚಗಳಾದ ಸಿಬ್ಬಂದಿ ವೇತನ, ವಿದ್ಯುತ್ ಶಕ್ತಿಯ ವೆಚ್ಚ, ದುರಸ್ತಿ ಮತ್ತು ನಿರ್ವಹಣೆ ಮತ್ತು ಇತರೆ ಆಡಳಿತ ವೆಚ್ಚಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿವೆ. ಆದರೆ, ಜೂನ್-2017ರ ಬೆಲೆ ಮಟ್ಟದಲ್ಲಿ ಆದಾಯವನ್ನು ಪಡೆಯಲಾಗುತ್ತಿದೆ. ಇದು ಕಾರ್ಯಾಚರಣೆ ಮತ್ತು ನಿರ್ವಹಣೆ ಮೇಲೆ ಪರಿಣಾಮ ಬೀರುತ್ತಿದೆ. ಸಾರ್ವಜನಿಕರಿಗೆ ತೊಂದರೆ-ಮುಕ್ತ, ಗುಣಮಟ್ಟದ ಸೇವೆಯನ್ನು ಒದಗಿಸುವ ಅಗತ್ಯವಿದೆ. ಇದಲ್ಲದೆ ಬೆಂಗಳೂರು ಮೆಟ್ರೋ ರೈಲು ನಿಗಮವು ಪಡೆದಿರುವ ಬಾಹ್ಯ ಸಾಲದ ಮೇಲಿನ ಬಡ್ಡಿಯನ್ನು JICA, AFD, ADB, EIB, AIIB ಮತ್ತು KFW ಮುಂತಾದ ಹಣಕಾಸು ಸಂಸ್ಥೆಗಳಿಗೆ, ವಿನಿಮಯ ದರದ ವ್ಯತ್ಯಾಸಗಳನ್ನು ಒಳಗೊಂಡಂತೆ ಚಾಲ್ತಿಯಲ್ಲಿರುವ ಬಡ್ಡಿ ದರದಲ್ಲಿ ಪಾವತಿಸಬೇಕಾಗಿರುತ್ತದೆ.

The Metro Railways (Operation and Maintenance) Act-2002 ಸೆಕ್ಷನ್-34, ಸಬ್ ಸೆಕ್ಷನ್-1 ರನ್ವಯ Fare Fixation Committee (FFC) ಯನ್ನು ರಚಿಸಲು ಅವಕಾಶ ಕಲ್ಪಿಸಿದೆ. ಸದರಿ The Metro Railways (Operation and Maintenance) Act-2002 ನ ಸೆಕ್ಷನ್-37 ರನ್ವಯ Fare Fixation Committee ನಿಗಧಿಪಡಿಸಿರುವ ದರವನ್ನು ಮೆಟ್ರೋ ನಿಗಮವು ದರವನ್ನು ಅಳವಡಿಕೊಳ್ಳುತ್ತದೆ.

ಡೆಲ್ಲಿ ಮೆಟ್ರೋ ರೈಲು ನಿಗಮವು 4 ದರ ನಿಗಧಿ ಸಮಿತಿ (Fare Fixation Committee) ಗಳು ಅಳವಡಿಸಿಕೊಂಡ ಸೂತ್ರದ ಆಧಾರದ ಮೇಲೆ, ಬೆಂಗಳೂರು ಮೆಟ್ರೋ ರೈಲು ನಿಗಮವು, ಸಿಬ್ಬಂದಿ ವೆಚ್ಚ, ಪ್ರತಿ ಯೂನಿಟ್‌ನ ವಿದ್ಯುತ್ ಶಕ್ತಿಯ ವೆಚ್ಚ ಮತ್ತು ಪ್ರತಿ ಕಿಲೋಮೀಟರ್ ನಿರ್ವಹಣೆ ಮತ್ತು ಇತರ ವೆಚ್ಚಗಳನ್ನು Consumer Price Index (CPI) ಯಲ್ಲಿನ ಬದಲಾವಣೆಗಳ ಆಧಾರದ ಮೇಲೆ ದರ ಹೆಚ್ಚಳವನ್ನು ರೂಪಿಸಲಾಗಿದೆ. ಅದರಂತೆ ಅಸ್ತಿತ್ವದಲ್ಲಿರುವ ದರದ ಮೇಲಿನ ಹೆಚ್ಚಳವನ್ನು14.02%ಗಳಷ್ಟು ಪ್ರತಿ ವರ್ಷದಂತೆ 7.50 ವರ್ಷಗಳ ಅವಧಿಯಲ್ಲಿ 105.15% ರಷ್ಟು ಹೆಚ್ಚಾಗಿರುತ್ತದೆ.

ಆದಾಗ್ಯೂ, ಪ್ರಯಾಣ ದರ ಪರಿಷ್ಕರಣೆಯಿಂದ ಪ್ರಯಾಣಿಕರ ಮೇಲಾಗುವ ಪರಿಣಾಮವನ್ನು ಕಡಿಮೆ ಮಾಡುವ ಉದ್ದೇಶದಿಂದ ಮತ್ತು ಬಿಎಂಆರ್‌ಸಿಎಲ್‌ನ ಆರ್ಥಿಕ ಸುಸ್ಥಿರತೆ ಮತ್ತು ಸಾಮಾನ್ಯ ಜನರಿಗೆ ಪ್ರಯಾಣ ದರವನ್ನು ಕಡಿಮೆ ಉದ್ದೇಶದಿಂದ ಈಗಾಗಲೇ ಹೆಚ್ಚಿಸಿರುವ 105.15% ಹೆಚ್ಚಳ (14.02% ಹೆಚ್ಚಳ/ವರ್ಷ)ಕ್ಕೆ ಬದಲಾಗಿ, ಸರಾಸರಿ 51.55% (6.87% ಹೆಚ್ಚಳ/ವರ್ಷ) ಪ್ರಯಾಣ ದರವನ್ನು ಪರಿಷ್ಕರಿಸಲು ದರ ನಿಗಧಿ ಸಮಿತಿ (FFC) ವೈಜ್ಞಾನಿಕವಾಗಿ ಶಿಫಾರಸ್ಸು ಮಾಡಿದೆ.

ಅದರಂತೆ, ದಿನಾಂಕ:09.02.2025 ರಂದು ಜಾರಿಯಾದ ಪರಿಷ್ಕೃತ ದರದಲ್ಲಿ ಗರಿಷ್ಠ 81.82% ರಿಂದ 100% ರಷ್ಟು ಹೆಚ್ಚಳ ಮಾಡಲಾಗಿತ್ತು. ತದನಂತರ ಈ ಬಗ್ಗೆ ಮರು ಪರಿಶೀಲಿಸಿ ದಿನಾಂಕ:14.02.2025 ರಂದು ಗರಿಷ್ಠ ದರದ ಹೆಚ್ಚಳವನ್ನು 71.43% ಗೆ ಇಳಿಕೆ ಮಾಡಲಾಗಿದೆ ಹಾಗೂ ಕನಿಷ್ಟ ದರ ಹೆಚ್ಚಳವು 51.55% ಆಗಿರುತ್ತದೆ.

ಬೆಂಗಳೂರು ಮೆಟ್ರೋ ರೈಲಿನಲ್ಲಿ ಪ್ರಯಾಣಿಸಿದ ಪ್ರಯಾಣಿಕರ ಸಂಖ್ಯೆ (Boarding) ಫೆಬ್ರುವರಿ 2024 ರಲ್ಲಿ ಸರಾಸರಿ 7,05,917 ಇದ್ದು ಫೆಬ್ರುವರಿ 2025ರಲ್ಲಿ ಪ್ರತಿ ದಿನ ಸರಾಸರಿ ಪ್ರಯಾಣಿಕರ ಸಂಖ್ಯೆ 7,49,615 ಆಗಿರುತ್ತದೆ. 2024ರ ಫೆಬ್ರುವರಿ ಮಾಹೆಯಲ್ಲಿ ಸಂಚರಿಸಿದ ಪ್ರಯಾಣಿಕರ ಸಂಖ್ಯೆಗೆ ಹೋಲಿಸಿದಾಗ 2025ರ ಫೆಬ್ರುವರಿ ತಿಂಗಳಿನಲ್ಲಿ ಸಂಚರಿಸಿರುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುತ್ತದೆ. ಆದರೂ ಸಮಿತಿ ಶಿಫಾರಸ್ಸನ್ನು ಜಾರಿಗೊಳಿಸಿದ ನಂತರ ಪ್ರಯಾಣಿಕರ ಸಂಖ್ಯೆಯಲ್ಲಿ ಅಲ್ಪ ಪ್ರಮಾಣದಲ್ಲಿ ಇಳಿಕೆ ಕಂಡಿದೆ. ಆದರೆ ಸಂಚಾರ ದಟ್ಟಣೆಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಿರುವುದಿಲ್ಲ.

ಮುಂದುವರೆದು, ಮೆಟ್ರೋ ಪ್ರಯಾಣ ದರವನ್ನು ಹೆಚ್ಚಿಸಿರುವುದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ.

ಕಡತ ಸಂಖ್ಯೆ: ನಅಇ 61 ಪಿ.ಆರ್.ಜೆ 2025

**(ಡಿ. ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ